ಸಾಕಷ್ಟು ಬೋರ್‌ವೆಲ್‌ಗಳು ಕೆಲಸಕ್ಕೆ ಬಾರದೆ ನಿರುಪಯುಕ್ತವಾಗುತ್ತಿದೆ. ಇವತ್ತು ಹೊಸ ಹೊಸ ಬೋರ್‌ವೆಲ್‌ಗಳನ್ನು ತೆಗೆಯುವ ಬದಲು ಈಗಿರತಕ್ಕ ಬೋರ್‌ವೆಲ್‌ಗಳ ರಿಪೇರಿಗೆ ನೀವು ವ್ಯವಸ್ಥೆ ಮಾಡಿದರೆ ಸಾಕಷ್ಟು ಹಣ ಉಳಿಸಬಹುದು.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ಸರ್ಕಾರದ ಖಜಾನೆಗೇ ಬೋರ್ ಹಾಕುತ್ತಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ:- ಇದು ಒಪ್ಪುತ್ತೇವೆ ಮಾನ್ಯ ಸಭಾಧ್ಯಕ್ಷರೆ. ಇದರ ಬಗ್ಗೆ ನಾವು ಕಾರ್ಯಕ್ರಮ ಕೈಗೊಳ್ಳೋಣ.

ಅಧ್ಯಕ್ಷರು: ಇದು I explained to you ಬೈರೇಗೌಡರು ನಿಮ್ಮ ಪಕ್ಕದಲ್ಲೇ ಕುಳಿತಿದ್ದಾರೆ. ನಮ್ಮಲ್ಲಿ ಕೆಲವು ಕಡೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ವಾಟರ್‌ಸಪ್ಲೈ ಇರತಕ್ಕಂಥ ಕಡೆಗೆ ಎಗ್ಸಾಸ್ಟ್ ಆಗಿದ್ದರೆ ಅಡಿಷನಲ್ ಬೋರ್ ಹಾಕಿದ್ದೇವೆ ಅಂತ ಹೇಳಿ, ನೀರೇ ಸಿಗದಿರುವ ಬೋರ್‌ಗೆ ಸರ್ವೀಸ್ ಆಗಿದೆ ಅಂತ ತೋರಿಸಿ ಮೋಟಾರ್ ಖರೀದಿ ಮಾಡಿ ಮತ್ತೆ ಆದು ಸರ್ವೀಸ್ ಆದರೆ ಆ ಮೋಟಾರನ್ನು ಸೇಲ್ ಮಾಡಿಕೊಂಡು ಮತ್ತೆ ಇನ್ನೊಂದು ಪಾಯಿಂಟ್‌ಗೆ ಅಂತ ಹೇಳಿ ಮಾಡಿದ್ದಾರೆ. All these things have been done. ಇದು ನಿಮಗೆ ಆಶ್ಚರ್ಯ ಆಗಬಹುದು ನಾಣಯ್ಯನವರೇ you have seen my native village. 10 feet from my house, right in front of my house, in my village, they have done. Can you imagine?

SRI M.C.NANAIAH:- Sir, we have taken very serious note of some of the observations made by the Hon'ble Speaker and Hon'ble Members and the Government will certainly look into the lapses and we will take serious action against the officers concerned.

ವಿಷಯ:- ವಿರಾಜಪೇಟೆ ತಾಲ್ಲೂಕು ಪಂಚಾಯಿತಿಗೆ 1995-96ನೇ ಸಾಲಿನಲ್ಲಿ ಹಣ ಬಿಡುಗಡೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 125(657)

ಶ್ರೀ ಬಸವರಾಜು, ಹೆಚ್.ಡಿ.(ವಿರಾಜಪೇಟೆ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ತಾಲ್ಲೂಕು ಪಂಚಾಯಿತಿಗೆ 1995-96ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಆಗಿರುತ್ತದೆ. ಮತ್ತು ಎಷ್ಟು ವೆಚ್ಚವಾಗಿರುತ್ತದೆ.

ಆ) ಕೊಡಗು ಜಿಲ್ಲೆಗೆ ಜಿಲ್ಲಾ ಪಂಚಾಯತ್ ಪತಿಯಿಂದ ಎಷ್ಟು ಹಣ ವೆಚ್ಚವಾಗಿರುತ್ತದೆ. (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಂ.ಪಿ.ಪ್ರಕಾಶ್(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ಸರ್ಕಾರದಿಂದ ತಾಲ್ಲೂಕು ಪಂಚಾಯಿತಿಗಳಲ್ಲಿ ಪ್ರತ್ಯೇಕವಾಗಿ ಹಣ ಬಿಡುಗಡೆಯಾಗುತ್ತಿಲ್ಲ. ಜಿಲ್ಲಾ ಪಂಚಾಯತ್‌ವಾರು ಮಾತ್ರ ಬಿಡುಗಡೆಯಾಗುತ್ತಿದ್ದು, ಜಿಲ್ಲಾ

ಪಂಚಾಯತ್‌ನಿಂದ ಜಿಲ್ಲೆಗೆ ಸಂಬಂಧಿಸಿದ ಇಲಾಖೆಗಳಿಗೆ ನೇರವಾಗಿ ಹಣ ಬಿಡುಗಡೆಯಾಗುತ್ತಿದೆ. ವಿರಾಜಪೇಟೆ ತಾಲ್ಲೂಕಿಗೆ ಸಂಬಂಧಿಸಿದಂತೆ 1995-96ನೇ ಸಾಲಿನಲ್ಲಿ ಜನವರಿಯ ಅಂತ್ಯದವರೆಗೂ ರೂ. 442.01 ಲಕ್ಷ ವೆಚ್ಚ ಮಾಡಲಾಗಿರುತ್ತದೆ.

ಆ) 1995-96ನೇ ಸಾಲಿನಲ್ಲಿ ಕೊಡಗು ಜಿಲ್ಲಾ ಪಂಚಾಯತಿನಲ್ಲಿ ಜನವರಿ ಅಂತ್ಯದವರೆಗೆ ಯೋಜನೆಯಲ್ಲಿ ರೂ. 1307.55 ಲಕ್ಷ ವೆಚ್ಚ ಮಾಡಲಾಗಿದೆ. ತಾಲ್ಲೂಕುವಾರು ವೆಚ್ಚದ ವಿವರಗಳು ಕೆಳಕಂಡಂತಿದೆ:-

	(ರೂ. ಲಕ್ಷಗಳಲ್ಲಿ)
ಮಡಿಕೇರಿ	432.73
ಸೋಮವಾರಪೇಟೆ	432.81
ವಿರಾಜಪೇಟೆ	442.01
ಒಟ್ಟು	1307.55

ಶ್ರೀ ಹೆಚ್. ಡಿ. ಬಸವರಾಜು:- ಸನ್ಮಾನ್ಯ ಅಧ್ಯಕ್ಷರೆ, ವಿರಾಜಪೇಟೆ ತಾಲ್ಲೂಕು ಪಂಚಾಯಿತಿಗೆ 1995-96ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆಯಾಗಿರುತ್ತದೆ ಅಂತ ನಾನು ಕೇಳಿದ್ದಕ್ಕೆ ಸರ್ಕಾರದಿಂದ ತಾಲ್ಲೂಕು ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಹಣ ಬಿಡುಗಡೆಯಾಗುತ್ತಿಲ್ಲ ಎಂದು ಹೇಳಿದ್ದೀರಿ. ಹಣ ಬಿಡುಗಡೆಯಾಗುತ್ತಿಲ್ಲ ಅಂದರೆ ಆ ತಾಲ್ಲೂಕು ಪಂಚಾಯಿತಿ ಯಾವ ವ್ಯವಸ್ಥೆಯಲ್ಲಿ ನಡೆಯುತ್ತಾ ಇದೆ? ಯಾವ ಅನುದಾನ ಅವರಿಗೆ ಸಿಗುತ್ತಾ ಇದೆ? ಅವರು ಆ ತಾಲ್ಲೂಕು ಪಂಚಾಯಿತಿಯಲ್ಲಿ ಅನುಮೋದನೆ ಮಾಡಿದಂಥ ಕಾರ್ಯವನ್ನು ಯಾವ ರೀತಿ ಕಾರ್ಯರೂಪಕ್ಕೆ ತರುತ್ತಾ ಇದ್ದಾರೆ? ಕಾರ್ಯರೂಪಕ್ಕೆ ತರಬೇಕಾದರೆ ಅವರಿಗೆ ಹಣ ಯಾವುದರಿಂದ ಸಿಗುತ್ತದೆ? ಇದಕ್ಕೆ ತಮ್ಮ ಮೂಲಕ ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರ ಪರವಾಗಿ:- ಮಾನ್ಯ ಅಧ್ಯಕ್ಷರೆ, 1995-96ಕ್ಕೆ ಈವೊಂದು ತಾಲ್ಲೂಕು ಪಂಚಾಯಿತಿಯ ಕಾರ್ಯ ಯೋಜನೆ ಯಾವುದು ಇದೆ, ಆ ಕಾರ್ಯ ಯೋಜನೆಗೆ ಜಿಲ್ಲಾ ಪಂಚಾಯಿತಿಯವರು ಮಂಜೂರಾತಿಯನ್ನು ಕೊಟ್ಟಿದ್ದಾರೆ. ಆದರೆ ಇವತ್ತಿಗೆ ತಾಲ್ಲೂಕು ಪಂಚಾಯಿತಿ ಮಾಡಿರತಕ್ಕ ಕಾರ್ಯ ಯೋಜನೆಗೆ, ಪ್ರತ್ಯೇಕವಾಗಿ ಕೊಡಲಿಕ್ಕೆ ಅವಕಾಶವಿಲ್ಲ. ಜಿಲ್ಲಾ ಪಂಚಾಯಿತಿಯ ವತಿಯಿಂದಲೇ ಅದನ್ನು ಮಾಡುತ್ತಿದ್ದಾರೆ. ಈಗ ಸರ್ಕಾರದ ವತಿಯಿಂದ ತಾಲ್ಲೂಕು ಪಂಚಾಯಿತಿಗೆ ಅದರ ಕಾರ್ಯ ಯೋಜನೆಯ ಅಡಿಯಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕು ಎನ್ನುವುದಕ್ಕೆ ಈಗಾಗಲೇ ಕರಡು ನಿಯಮಗಳನ್ನು ಇಲಾಖೆಯಿಂದ ರೆಡಿ ಮಾಡಿದ್ದಾರೆ. ಈ ಕರಡು ನಿಯಮವನ್ನು ನಾವು ರಾಜ್ಯಪತ್ರದಲ್ಲಿ ಪಬ್ಲಿಷ್ ಮಾಡಿ ಅದನ್ನು ಜಾರಿಗೆ ತರಲಿಕ್ಕೆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಇದು ಒಂದು ಸಲ ಜಾರಿಗೆ ಬಂದ ಮೇಲೆ ಆ ತಾಲ್ಲೂಕು ಪಂಚಾಯಿತಿಯ ಕಾರ್ಯವ್ಯಾಪ್ತಿ ಯೋಜನೆಯೊಳಗಡೆ ಬರತಕ್ಕ ಕೆಲಸಕ್ಕೆ ಹಣವನ್ನು ಜಿಲ್ಲಾ ಪಂಚಾಯಿತಿಯಿಂದ ನೇರವಾಗಿ ಅವರಿಗೆ ಬಿಡುಗಡೆ ಮಾಡಲಿಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಕರಡು ನಿಯಮಗಳು ಇನ್ನು ಕೆಲವೇ ದಿವಸಗಳಲ್ಲಿ ಜಾರಿಯಲ್ಲಿ ಬರುತ್ತಿವೆ.

ಶ್ರೀ ಹೆಚ್.ಡಿ. ಬಸವರಾಜ್:- ಮಾನ್ಯ ಅಧ್ಯಕ್ಷರೆ, ಈಗ ಪಂಚಾಯಿತಿಯಲ್ಲಿ ತೀರ್ಮಾನವಾಗಿದ್ದನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಬೇಕು. ಜಿಲ್ಲಾ ಪಂಚಾಯಿತಿಯವರು ನಿರ್ಧಾರ ಮಾಡಿದರು . ಅಂದರೆ ತಾಲ್ಲೂಕು ಪಂಚಾಯಿತಿಗಳು ನಿಮ್ಮ ಕರಡು ನಿಯಮಗಳನ್ನು ನೀವೇನು ತಯಾರು ಮಾಡುತ್ತೀರೋ ಅಲ್ಲಿಯವರೆಗೆ ತಾಲ್ಲೂಕು ಪಂಚಾಯಿತಿಗಳನ್ನು ಸ್ಥಗಿತಗೊಳಿಸಬೇಕು. ಏಕೆಂದರೆ ಅವರು ಅಲ್ಲಿ ನಿರ್ಧಾರ ಮಾಡುವುದನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಟ್ಟರೆ, ಅವರು ಅನುಮೋದನೆಯನ್ನು ಮಾಡಲೂ ಬಹುದು ಮಾಡದೇ ಇರಲೂಬಹುದು. ಹಾಗೆ ಇದ್ದಮೇಲೆ ತಾಲ್ಲೂಕು ಪಂಚಾಯಿತಿ ವ್ಯವಸ್ಥಿತ ರೀತಿಯಲ್ಲಿ ಹೇಗೆ ಕೆಲಸ ಮಾಡಬೇಕಾಗಿದೆ? ನಿಮ್ಮ ಕರಡು ನಿರ್ಣಯ ಯಾವ್ಯಾವುದು ತಯಾರಾಗಬೇಕಾಗಿದೆಯೋ ಅಲ್ಲಿಯವರೆಗೂ ಕೆಲಸ ಮಾಡುವುದು ಬೇಡವೆಂದು ದಯವಿಟ್ಟು ಒಂದು ಸುತ್ತೋಲೆಯನ್ನು ಕಳುಹಿಸಿದರೆ ಉತ್ತಮವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಬೇಕಾದಷ್ಟು ಕಾಮಗಾರಿಗಳು ಕಳಪೆಮಟ್ಟದಲ್ಲಿ ನಡೆಯುತ್ತಿವೆ. ತಮ್ಮ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ವ್ಯವಸ್ಥಿತ ರೀತಿಯಲ್ಲಿ ಅದನ್ನು ಪರಿಶೀಲನೆ ಮಾಡುವಂತಹ ಯಾವುದೇ ಒಂದು ವಿಂಗ್ ಇಲ್ಲ. ಗುಣ ನಿಯಂತ್ರಣವನ್ನು ಮಾಡಬೇಕೆಂದರೆ ಸರ್ಕಾರ ಏನು ಮಾಡುತ್ತಿದೆ? ಗುಣಮಟ್ಟವನ್ನು ಕಾಪಾಡುವಂತಹ ಕೆಲಸಕಾರ್ಯಗಳನ್ನು ಮಾಡುತ್ತಿರುವವರ ಮೇಲೆ ಏನು ಕ್ರಮವನ್ನು ಕೈಗೊಳ್ಳಲಾಗುತ್ತಿದೆ? ಅದನ್ನು ಮಾನ್ಯ ಮಂತ್ರಿಗಳು ಈ ಸಂದರ್ಭದಲ್ಲಿ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಕರಡು ನಿಯಮಗಳನ್ನು ಜಾರಿಗೆ ತರುವವರೆಗೆ ಕೆಲಸಗಳನ್ನು ಸ್ಥಗಿತಗೊಳಿಸಬೇಕೆಂದು ಹೇಳತಕ್ಕ ಮಾನ್ಯ ಸದಸ್ಯರ ಸಲಹೆ ಯಾವುದು ಇದೆ ಈ ಸಲಹೆಯಿಂದ ಯಾರಿಗೂ ಲಾಭವಾಗುವುದಿಲ್ಲ. ತಾಲ್ಲೂಕಿನಲ್ಲಿ ಕೆಲಸ ಆಗಲೇಬೇಕಾಗುತ್ತದೆ. ಆ ಕೆಲಸ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮುಖಾಂತರವಾದರೆ ಜಿಲ್ಲಾ ಪಂಚಾಯಿತಿಯವರು ಹಣವನ್ನು ಒದಗಿಸುತ್ತಾರೆ. ಕರಡು ನಿಯಮಗಳು ಜಾರಿಗೆ ಬಂದ ಮೇಲೆ ತಾಲ್ಲೂಕು ಪಂಚಾಯಿತಿಗಳಿಗೆ ಹಣವನ್ನು ನೇರವಾಗಿ ಬಿಡುಗಡೆ ಮಾಡುತ್ತೇವೆ. ಎರಡನೆಯದಾಗಿ ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿ ತಾಲ್ಲೂಕು ಪಂಚಾಯಿತಿ ವತಿಯಲ್ಲಿ ಕಳಪೆ ಕೆಲಸ ಆಗುತ್ತಾ ಉಂಟು ಅಂತ ಹೇಳಿದರು. ಮಾನ್ಯ ಅಧ್ಯಕ್ಷರೆ, ನಾನೂ ಮತ್ತು ಮಾನ್ಯ ಸದಸ್ಯರಾದ ಬಸವರಾಜ್‌ರವರು ಇಬ್ಬರೂ ಜಿಲ್ಲಾ ಪಂಚಾಯತಿಯ ಸದಸ್ಯರು. ಪ್ರತಿ ಮೀಟಿಂಗ್‌ನಲ್ಲಿ ನಾವು ಇದರ ಬಗ್ಗೆ ಚರ್ಚೆ ಮಾಡುತ್ತೇವೆ. ಎಲ್ಲಿಕಳಪೆ ಕೆಲಸ ಆಗಿದೆಯೆಂದು ಹೇಳುವುದನ್ನು ದಯವಿಟ್ಟು ನನ್ನ ಗಮನಕ್ಕೆ ತನ್ನಿ. ಇಲ್ಲ ಜಿಲ್ಲಾ ಪಂಚಾಯಿತಿಯ ಗಮನಕ್ಕೆ ತನ್ನಿ, ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದೇನೆ. ನಿಮ್ಮ ಕ್ಷೇತ್ರದಲ್ಲಿ ಕೂಡ ನಾನು ಬಹಳಷ್ಟು ಅಡ್ಡಾಡಿದ್ದೇನೆ. ಎಲ್ಲೆಲ್ಲಿ ಅಧಿಕಾರಿಗಳು ಅವ್ಯವಹಾರ ನಡೆಸಿದ್ದಾರೆ, ಅದರ ಬಗ್ಗೆ ಜಿಲ್ಲಾ ಪಂಚಾಯಿತಿಯಲ್ಲಿ ನಿಮ್ಮ ಎದುರುಗಡೆ ನಮ್ಮ ಚಿಂತನೆಯನ್ನು ಹೇಳಿದ್ದೇನೆ. ಬಹುಶಃ ಎಲ್ಲಿಯಾದರೂ ನಿರ್ದಿಷ್ಟವಾಗಿರತಕ್ಕ ಕಳಪೆ ಕೆಲಸಗಳನ್ನು ತಾವು ದಯವಿಟ್ಟು ನನ್ನ ಗಮನಕ್ಕೆ ತನ್ನಿ, ಜಿಲ್ಲಾ ಉಸ್ತುವಾರಿ ಸಚಿವನಾಗಿ ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ತಿಪಟೂರು ತಾಲ್ಲೂಕಿನ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 50(218)